DECEMBER 01, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಮನ್ ಕಿ ಬಾತ್**; ಸಾಮುದಾಯಿಕ ಸಹಭಾಗಿತ್ವದಲ್ಲಿ, ಯಶ ಸಾಧಿಸಿದ, ರಾಜ್ಯದ ಜೇನು ಸಾಕಣೆ ಪ್ರಯೋಗ ಶ್ಲಾಘಿಸಿದ, ಪ್ರಧಾನಮಂತ್ರಿ.
- **'ಸೌರ ಸ್ವಾಸ್ಥ್ಯ ಯೋಜನೆ'**; ಸೆಲ್ಕೋ ಸಹಕಾರದಲ್ಲಿ, ರಾಜ್ಯದ ಐದು ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಘಟಕ ಅಳವಡಿಕೆ, ಗುರಿ.
- **ಎಚ್.ಐ.ವಿ. ಹಾಗೂ ಏಡ್ಸ್ ಹರಡುವಿಕೆ** ನಿಯಂತ್ರಿಸುವ, ಅಡೆತಡೆಗಳನ್ನು ಕೊನೆಗಾಣಿಸುವುದು; ಧ್ಯೇಯದೊಂದಿಗೆ, ಇಂದು ಏಡ್ಸ್ ಜಾಗೃತಿ ದಿನಾಚರಣೆ.
- **'ಯುವ ಆಪತ್ ಮಿತ್ರ ಯೋಜನೆ'**; ಸ್ಕೌಟ್ಸ್ ಮತ್ತು ಗೈಡ್ಸ್ ನ, 3 ಸಾವಿರದ 700 ವಿದ್ಯಾರ್ಥಿ ಸ್ವಯಂಸೇವಕರಿಗೆ, ವಿಪತ್ತು ನಿರ್ವಹಣೆ ತರಬೇತಿ.

<><><>

**ಭಾರತೀಯ ನೌಕಾಪಡೆ,** ಬಹುವೇಗದಿಂದ ಆತ್ಮನಿರ್ಭರತೆಯತ್ತ ಹೆಜ್ಜೆ ಹಾಕುತ್ತಿದೆ.ಈ ತಿಂಗಳ 4ನೇ ತಾರೀಖು, 'ನೌಕಾಪಡೆ ದಿನ'ವನ್ನು ವಿಶೇಷವಾಗಿ ಆಚರಿಸಲಾಗುವುದು ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, 'ಮನ್ ಕಿ ಬಾತ್' ನ, 128ನೇ ಆವೃತ್ತಿಯಲ್ಲಿ, ಹೇಳಿದರು. ಕಾರವಾರದ, ರವೀಂದ್ರನಾಥ ಟ್ಯಾಗೋರ್, ಕಡಲ ತೀರದ, ಯುದ್ಧ ನೌಕೆಯ ವಸ್ತುಸಂಗ್ರಹಾಲಯದಲ್ಲಿ, ಕ್ಷಿಪಣಿಗಳು ಮತ್ತು ಶಸ್ತ್ರಾಸ್ತ್ರಗಳ ಪ್ರತಿಕೃತಿಗಳನ್ನು ಇರಿಸಿ, ನಮ್ಮ ದೇಶದ, ಸೈನ್ಯ ಇತಿಹಾಸದ ಬಗ್ಗೆ, ಶ್ರೀಸಾಮಾನ್ಯರಲ್ಲಿ ಆಸಕ್ತಿ ಅರಳಿಸಲು, ಪ್ರವಾಸಿ ತಾಣವಾಗಿ ರೂಪಿಸಲಾಗಿದೆ, ಎಂದರು.

<><><>

**ದಕ್ಷಿಣಕನ್ನಡ ಜಿಲ್ಲೆ ಪುತ್ತೂರಿನ,** ರೈತ ಉತ್ಪಾದಕರ ಕಂಪೆನಿ ಸ್ವಾಮಿತ್ವದ, ಅತ್ಯಾಧುನಿಕ, 'ಗ್ರಾಮಜನ್ಯ ಜೇನು ಸಂಸ್ಕರಣಾ ಘಟಕ' ಹಾಗೂ ತುಮಕೂರು ಜಿಲ್ಲೆಯ, 'ಶಿವಗಂಗಾ ಮಹಿಳಾ ಕಳಂಜಿಯಂ' ಜೇನು ಉತ್ಪಾದನಾ ಸಂಸ್ಥೆಗಳ, ಸಾಮುದಾಯಿಕ ಸಹಭಾಗಿತ್ವದ ಜೇನು ಸಾಕಣೆ, ನಿರ್ವಹಣೆ, ಜೇನು ತುಪ್ಪ ಉತ್ಪಾದನೆ ಹಾಗೂ ಬ್ರ್ಯಾಂಡಿಂಗ್ ಮೂಲಕ, ರೈತರ ಆದಾಯ ವೃದ್ಧಿ ಕುರಿತು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನದ ಮಾತಿನಲ್ಲಿ ವಿಶೇಷವಾಗಿ ಉಲ್ಲೇಖಿಸಿ, ಶ್ಲಾಘಿಸಿದರು.

ಈ ಕುರಿತು, ಒಂದು ವರದಿ..

***ತುಮಕೂರು ಜಿಲ್ಲೆಯ, 'ಶಿವಗಂಗಾ ಕಾಲಂಜಿಯಾ ಸಂಸ್ಥೆ' ತನ್ನ ಪ್ರತಿಯೊಬ್ಬ ಸದಸ್ಯರಿಗೂ, ಆರಂಭದಲ್ಲಿ, ಎರಡು ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳನ್ನು ನೀಡಿ, ಜೇನು ಕೃಷಿಯಲ್ಲಿ ತೊಡಗುವಂತೆ ಪ್ರೇರೇಪಿಸಿದ್ದು, ಪ್ರಧಾನಮಂತ್ರಿಯವರ ಗಮನ ಸೆಳೆದಿದೆ. ದಕ್ಷಿಣಕನ್ನಡ ಜಿಲ್ಲೆ, ಪುತ್ತೂರಿನ ಗ್ರಾಮಜನ್ಯ ರೈತ ಉತ್ಪಾದಕರ ಕಂಪೆನಿ ಸಂಚಾಲಿತ, ದಕ್ಷಿಣ ಭಾರತದ, ಅತಿ ದೊಡ್ಡ ಜೇನು ಸಂಸ್ಕರಣಾ ಘಟಕ, 40 ಟನ್ ನಷ್ಟು ಜೇನು ತುಪ್ಪ ಸಂಗ್ರಹಿಸಿ, ಶೀತಲೀಕರಿಸುವ ವ್ಯವಸ್ಥೆ ಹೊಂದಿದೆ. ಗ್ರಾಮಜನ್ಯ ಜೇನು ಸಂಸ್ಕರಣಾ ಘಟಕದ ವಿಶೇಷತೆ ಕುರಿತು, ಮಾಹಿತಿ ನೀಡಿದ್ದಾರೆ, ಸಂಸ್ಥೆಯ ನಿರ್ದೇಶಕ ನಿರಂಜನ ಪೋಳ್ಯ..***

<><><>

**ಧಾರವಾಡ ತಾಲೂಕು ಮಂಡ್ಯಾಳದಲ್ಲಿ,** ಸಾವಯವ ಕೃಷಿ ಹಾಗೂ ಜೇನು ಸಾಕಣೆಯಲ್ಲಿ ತೊಡಗಿರುವ, ಕೃಷ್ಣಕುಮಾರ ಭಾಗವತ, ಕಳೆದ 45 ವರ್ಷಗಳಿಂದ, ಜೇನು ಕುಟುಂಬಗಳ ಸಲಹುವಿಕೆ, ಸಾಗಣೆ, ಸಂಗ್ರಹ ಹಾಗೂ ಜೇನು ತುಪ್ಪದ ಮೌಲ್ಯವರ್ಧನೆಯಲ್ಲಿ, ತೊಡಗಿಸಿಕೊಂಡಿದ್ದಾರೆ. ಜೇನು ಕೃಷಿ ಆಸಕ್ತರಿಗೆ, ತರಬೇತಿ ಸಹ ನೀಡುತ್ತಿದ್ದಾರೆ. ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್' ಆಲಿಸಿರುವ ಅವರು, 'ಎಪಿಸ್ ಸೆರೆನಾ ಇಂಡಿಕಾ' ಹಾಗೂ 'ಎಪಿಸ್ ಡೋರ್ಸೆಟ್ಟಾ' ಪ್ರಜಾತಿಯ, ಜೇನು ಕುಟುಂಬಗಳನ್ನು, ಭಯಪಟ್ಟು ಕೊಲ್ಲುವುದನ್ನು ನಿಲ್ಲಿಸಿ, ಸುರಕ್ಷಿತವಾಗಿ ಸ್ಥಳಾಂತರಿಸಲು, ಅನುವು ಮಾಡುವಂತೆ, ಮನವಿ ಮಾಡಿದ್ದಾರೆ.

<><><>

**ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ,** ನಿರಂತರ ವಿದ್ಯುತ್ ಸೌಲಭ್ಯ ಖಾತ್ರಿ ಪಡಿಸಲು, ಐದು ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಘಟಕ ಅಳವಡಿಕೆ ಗುರಿಯೊಂದಿಗೆ, ಕಳೆದ ವರ್ಷ, 'ಸೌರ ಸ್ವಾಸ್ಥ್ಯ ಯೋಜನೆ'ಗೆ ಚಾಲನೆ ನೀಡಲಾಯಿತು ಎಂದು, ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ, ತಿಳಿಸಿದ್ದಾರೆ. ಆರೋಗ್ಯ ಇಲಾಖೆ, ಸೆಲ್ಕೋ ಫೌಂಡೇಶನ್ ಸಹಯೋಗದಲ್ಲಿ, 2024ರ ನವೆಂಬರ್‌ನಲ್ಲಿ "ಸೌರ ಸ್ವಾಸ್ಥ್ಯ" ಯೋಜನೆಗೆ ಚಾಲನೆ ನೀಡಿತು. ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ, ಸೆಲ್ಕೋ ಫೌಂಡೇಷನ್, ಸೌರ ವಿದ್ಯುತ್ ಘಟಕಗಳ ಅಳವಡಿಕೆಗೆ, ಆರ್ಥಿಕ ನೆರವು ಒದಗಿಸುತ್ತಿದೆ. ಈಗಾಗಲೇ 3 ಸಾವಿರದ 600 ಆಸ್ಪತ್ರೆಗಳಲ್ಲಿ, ಸೌರ ವಿದ್ಯುತ್ ಘಟಕ ಅಳವಡಿಸಲಾಗಿದ್ದು, ಉಳಿತಾಯವಾಗುವ ವಿದ್ಯುತ್ ವೆಚ್ಚವನ್ನು, ಆಸ್ಪತ್ರೆಗಳ ನಿರ್ವಹಣೆ ಹಾಗೂ ಸೌಲಭ್ಯಗಳಿಗೆ ಬಳಕೆ ಮಾಡಲಾಗುತ್ತಿದೆ ಎಂದು ಸಚಿವರು, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**"ಎಚ್.ಐ.ವಿ. ಹಾಗೂ ಏಡ್ಸ್ ಹರಡುವಿಕೆಯನ್ನು** ನಿಯಂತ್ರಿಸುವಲ್ಲಿರುವ, ಅಡೆತಡೆಗಳನ್ನು ಕೊನೆಗಾಣಿಸುವುದು" ಎಂಬ ಧ್ಯೇಯದೊಂದಿಗೆ, ಇಂದು ಏಡ್ಸ್ ಜಾಗೃತಿ ದಿನಾಚರಣೆ. ರಾಜ್ಯ ಏಡ್ಸ್ ಪ್ರಿವೆನ್ಶನ್ ಸೊಸಾಯಿಟಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ, ಅಮೃತ

ಮಹೋತ್ಸವ ಭವನದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನ ಕಾರ್ಯಕ್ರಮ ಆಯೋಜಿಸಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ, ಪಾಲ್ಗೊಳ್ಳಲಿದ್ದಾರೆ.

<><><>

**ಬೆಳಗ್ಗೆ 9 ಗಂಟೆಗೆ, ಜನ ಜಾಗ್ರತಿ ಜಾಥಾ,** ಮೈಸೂರಿನ ಅರಮನೆ ಆವರಣದ, ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾಗಿ, ಮೈಸೂರಿನ ಜೆ.ಕೆ ಮೈದಾನದ, ಅಮೃತ ಮಹೋತ್ಸವ ಭವನದ ವರೆಗೆ, ನಡೆಯಲಿದೆ.

<><><>

**ಹೆಚ್.ಐ.ವಿ. ಹೊಸ ಸೋಂಕನ್ನು** ಶೂನ್ಯಕ್ಕಿಳಿಸಿ, 2030ಕ್ಕೆ ಕೊನೆಗಾಣಿಸುವ ಧ್ಯೇಯದೊಂದಿಗೆ, ಏಡ್ಸ್ ದಿನಾಚರಣೆ ಆಯೋಜಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ, ಮೈಸೂರಿನ, ಸ್ವಾಮಿ ವಿವೇಕಾನಂದ ಯೂಥ್ ಮೂವ್ಮೆಂಟ್, ಎಚ್.ಐ.ವಿ. ಹಾಗೂ ಏಡ್ಸ್ ಆರೈಕೆ ಮತ್ತು ಚಿಕಿತ್ಸೆ ಪ್ರಕಲ್ಪದ, ರಾಜ್ಯ ತಾಂತ್ರಿಕ ನಿರ್ದೇಶಕ, ಡಾಕ್ಟರ್ ಎಚ್.ಜೆ.ದೀಪಕ ಮೂರ್ತಿ.

<><><>

**ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಂಯೋಜಿತ,** 'ಯುವ ಆಪತ್ ಮಿತ್ರ ಯೋಜನೆ' ಅಡಿ, ಸ್ಕೌಟ್ಸ್ ಮತ್ತು ಗೈಡ್ಸ್ ನ, 3 ಸಾವಿರದ 700 ವಿದ್ಯಾರ್ಥಿ ಸ್ವಯಂಸೇವಕರಿಗೆ, ವಿಪತ್ತು ನಿರ್ವಹಣಾ ತರಬೇತಿ ನೀಡಲಾಗಿದೆ, ಎಂದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಮುಖ್ಯ ಆಯುಕ್ತ, ಪಿ.ಜಿ.ಆರ್. ಸಿಂಧ್ಯಾ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದ, ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ಅವರು ಮಾತನಾಡಿದರು. 26ನೇ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರಿ, ಈ ತಿಂಗಳ 27 ರಿಂದ, 7 ದಿನಗಳ ಕಾಲ, ಬೆಳಗಾವಿಯಲ್ಲಿ ನಡೆಯಲಿದೆ, ಎಂದರು. ಉತ್ತರ ಪ್ರದೇಶದ ಲಕ್ನೋದಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಯೋಜಿಸಿದ್ದ, 19ನೇ ರಾಷ್ಟ್ರೀಯ ಜಾಂಬೂರೇಟ್‌ನಲ್ಲಿ, ರಾಜ್ಯದ 800 ಸ್ಕೌಟ್ ಮತ್ತು ಗೈಡ್ಸ್ ಸ್ವಯಂಸೇವಕರು, 50ಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿ, ಗಣನೀಯ ಸಾಧನೆಗೈಯ್ದಿದ್ದಾರೆ, ಎಂದು ಸಿಂಧ್ಯಾ, ಸಂತಸ ವ್ಯಕ್ತ ಪಡಿಸಿದರು.

<><><>

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್** ಇಲಾಖೆಯ, 'ಇ–ಸ್ವತ್ತು 2.0 ತಂತ್ರಾಂಶ'ಕ್ಕೆ, ಇಂದು ಬೆಳಗ್ಗೆ 11.00 ಗಂಟೆಗೆ, ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಚಾಲನೆ ನೀಡಲಿದ್ದಾರೆ. 2023–24ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಗಳನ್ನು, 238 ಗ್ರಾಮ ಪಂಚಾಯಿತಿಗಳಿಗೆ ನೀಡಿ, ಗೌರವಿಸಲಿದ್ದಾರೆ. ಐದು ಲಕ್ಷ ರೂಪಾಯಿ ಪಗರೋತ್ಸಾಹ ಧನ, ಸ್ಮರಣಿಕೆ ಹಾಗೂ ಪ್ರಮಾಣಪತ್ರವನ್ನು, ಈ ಪುರಸ್ಕಾರ ಒಳಗೊಂಡಿದೆ. ಇಲಾಖೆಯ ಸಚಿವ ಪ್ರಿಯಾಂಕ ಖರ್ಗೆ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

- **ಮನ್ ಕಿ ಬಾತ್;** ಸಾಮುದಾಯಿಕ ಸಹಭಾಗಿತ್ವದಲ್ಲಿ, ಯಶ ಸಾಧಿಸಿದ, ರಾಜ್ಯದ ಜೇನು ಸಾಕಣೆ ಪ್ರಯೋಗ ಶ್ಲಾಘಿಸಿದ, ಪ್ರಧಾನಮಂತ್ರಿ.
- **'ಸೌರ ಸ್ವಾಸ್ಥ್ಯ ಯೋಜನೆ';** ಸೆಲ್ಕೋ ಸಹಕಾರದಲ್ಲಿ, ರಾಜ್ಯದ ಐದು ಸಾವಿರ ಆರೋಗ್ಯ ಕೇಂದ್ರಗಳಲ್ಲಿ, ಸೌರ ವಿದ್ಯುತ್ ಘಟಕ ಅಳವಡಿಕೆ, ಗುರಿ.
- **ಎಚ್.ಐ.ವಿ. ಹಾಗೂ ಏಡ್ಸ್ ಹರಡುವಿಕೆ** ನಿಯಂತ್ರಿಸುವ, ಅಡೆತಡೆಗಳನ್ನು ಕೊನೆಗಾಣಿಸುವುದು; ಧ್ಯೇಯದೊಂದಿಗೆ, ಇಂದು ಏಡ್ಸ್ ಜಾಗೃತಿ ದಿನಾಚರಣೆ.
- **'ಯುವ ಆಪತ್ ಮಿತ್ರ ಯೋಜನೆ';** ಸ್ಕೌಟ್ಸ್ ಮತ್ತು ಗೈಡ್ಸ್ ನ, 3 ಸಾವಿರದ 700 ವಿದ್ಯಾರ್ಥಿ ಸ್ವಯಂಸೇವಕರಿಗೆ, ವಿಪತ್ತು ನಿರ್ವಹಣೆ ತರಬೇತಿ.

<><><>